‘ಎದುರಾಳಿ’ಯೂ ಚೌಡಿಗೆ ಕೈ ಮುಗಿದು ನನಗೆ ಏನೂ ತೊಂದರೆಯಾಗದಂತೆ ನೋಡಿಕೋ... ಹಂದಿ ಬಲಿ ಕೊಡ್ತೀನಿ’ ಎಂತ ಹರಕೆ ಕಟ್ಟಿಕೊಂಡಿರ್‍ತಾನೆ. ಅಷ್ಟರಲ್ಲಿ ಅವೆರಡು ಕುಟುಂಬವೂ ತಲೆ ತಲಾಂತರದ ವೈರಿಗಳಾಗಿ ಮಾರ್ಪಟ್ಟಿರುತ್ತವೆ.

ಹೀಗೆ ಒಂದಕ್ಕೆರಡು ಹಂದಿ ಚೌಡಮ್ಮನಿಗೆ.

ಇದೆಷ್ಟು ಹೆಸರುವಾಸಿ ಆಗಿದೆ ಎಂದರೆ ಈ ಹೋಬಳಿ ಜನವೇ ಅಲ್ಲದೆ, ದೂರ ದೂರದಿಂದ ಎಲ್ಲಾ ಹಂದಿ ಹೊತ್ಗಂಡು ಬರ್‍ತಾರೆ.

ಅವತ್ತು ಹಬ್ಬದ ದಿನ ಗೌಜು ನೋಡ್ಬೇಕು. ಹಂದಿಗಳ ಅರಚಾಟ, ಜನರ ಗದ್ದಲ ನಮ್ಮ ಹೊಲಗೇರಿಗೂ ಕೇಳುತ್ತಾ ಇರುತ್ತೆ. ನೂರಾರು ಹಂದಿಗಳು, ಸಾವಿರಾರು ಜನ... ಕಾಡಿಗೇ ಜೀವ ಬಂದಿರುತ್ತೆ.

ಹಂದಿಯ ಮೇಲೆ ಗೌಡರ ಕಡೆಯವರು ತೀರ್ಥ ಚಿಮುಕಿಸಿದ ನಂತರ, ಹರಕೆಯವರು ಹಂದಿ ಹೊತ್ತುಕೊಂಡು ಚೌಡಿ ಕಲ್ಲಿನ ಕಡೆ ಹೋಗುತ್ತಾರೆ. ಹರಿತವಾಗಿ ಮಸೆದ ಕತ್ತಿಗಳನ್ನು ಇಟ್ಟುಕೊಂಡು ಇಬ್ಬರು ನಿಂತಿರುತ್ತಾರೆ. ಒಬ್ಬ ಹಂದಿಯ ಕುತ್ತಿಗೆಯ ತಳಭಾಗವನ್ನು ಚೊರಚೊರನೆ ಕುಯ್ಯುತ್ತ ನಾಳವನ್ನು ತುಂಡು ಮಾಡಿದೊಡನೆಯೇ, ಇನ್ನೊಬ್ಬ ಉಳಿದ ಮೂಳೆಯ ಭಾಗವನ್ನು ಒಮ್ಮೆಗೇ ತುಂಡರಿಸಿ ರುಂಡವನ್ನು ಕೆಳಗೆಸೆಯುತ್ತಾನೆ. ನಂತರ ಮುಂಡವನ್ನು ಇಬ್ಬರೂ ಕಾಲು ಹಿಡಿದು ತೂಗಿ ಕೆಳಗೆಸೆಯುತ್ತಾರೆ.

ಅಲ್ಲಿ ಹಂದಿ ಹಸಮಾಡುವ ಜನರ ಗುಂಪುಗಳೇ ಇರುತ್ತವೆ. ಒಡೆಯನಿಂದ ಹಂದಿಯನ್ನು ಕಿತ್ತುಕೊಂಡ ಅವರು ಅದನ್ನು ಹೊತ್ತುಕೊಂಡು ಗದ್ದೆಯಾಚೆಯ ಬೆಟ್ಟದೋರೆಯ ಕುರುಚಲು ಕಾಡಿನ ಮರೆಗೆ ಓಡುತ್ತಾರೆ.

ಸ್ವಚ್ಛಗೊಳಿಸಿ ಅಡುಗೆಗೆ ಸಿದ್ಧವಾಗುವ ಮಾಂಸ ಮೂರು ಭಾಗವಾಗುತ್ತದೆ.

ಹಸ ಮಾಡಿದವರ ಪಾಲು, ಹರಕೆಯವರ ಪಾಲು, ದೇವರ ಪಾಲು.

ಸಂಗ್ರಹವಾದ ಸಾವಿರಾರು ಕೇಜಿಯ ದೇವರ ಪಾಲಿನ ಮಾಂಸವೇ ಗದ್ದೆಯ ನಡುವೆ ಸಣ್ಣ ಬೆಟ್ಟದಂತೆ ತೋರುತ್ತದೆ.

ಮಂಜಣ್ಣ ಹೇಳುತ್ತಾ ಹೋದಂತೆ ದುಮ್ಮ ಕಣ್ಮುಚ್ಚಿಕೊಂಡು ಅನುಭವಿಸತೊಡಗಿದ.

ಗದ್ದೆ ಬಯಲಿನ ನಡುವೆ ಮಾಂಸದ ಬೆಟ್ಟ. ಅದರೆದುರಿಗೇ ಉದ್ದಕ್ಕೇ ನೆಲದಲ್ಲಿ ನಿರ್ಮಿಸಿದ ಧಗಧಗಿಸಿ ಉರಿಯುವ ಒಲೆ. ಅದರ ಮೇಲೆ ಸಾಲು ಸಾಲು ದೊಡ್ಡ ಪಾತ್ರೆಗಳಲ್ಲಿ ಕೊತ ಕೊತ ಕುದಿಯುವ ಮಾಂಸದ ಪದಾರ್ಥ. ಅದರಿಂದ ಹೊಮ್ಮಿದ ಪರಿಮಳ ಸುತ್ತಲ ಬೆಟ್ಟ ಕಾಡಿನಲ್ಲೆಲ್ಲಾ ಪಸರಿಸಿ ತನ್ನ ಮೂಗಿಗೂ ಅಡರಿದಂತೆ ಆಗಿ ದುಮ್ಮ ಬಾಯಿ ಚಪ್ಪರಿಸಿಕೊಳ್ಳುತ್ತಾ, ‘ಆಹಾ! ಆ ಸಂಭ್ರಮವನ್ನು ನಾನೂ ಒಮ್ಮೆ ನೋಡಬೇಕಲ್ಲ’ ಎಂದು ತನಗರಿವಿಲ್ಲದೆಯೇ ಹೇಳಿಕೊಂಡ.

‘ಅದೆಲ್ಲಿ ನಿನ್ನ ಹಣೇಲಿ ಬರ್‍ದಿತೆ ಬುಡೋ. ಇಲ್ಲೇ ಹುಟ್ಟಿ ಬೆಳೆದ ನಾನೇ ನೋಡಿಲ್ಲ. ಇದುವರೆಗೂ ನಾನು ಹೇಳಿದ್ದೆಲ್ಲಾ ನನ್ನ ಓರಗೆಯ ಗೌಡ್ರ ಹುಡುಗರ ಬಾಯಲ್ಲಿ ಪ್ರತಿ ವರ್ಷ ಕೇಳುತ್ತಾ ಬಂದಿದ್ದು. ಗೌಡ್ರುಗಳೂ ಸಹಾ ಚೌಡಿ ಹಬ್ಬ ಆದ ಒಂದು ವಾರದವರೆಗೂ ಅದರ ಸಂಭ್ರಮವನ್ನೇ ಹೊಗಳ್ತಾ ಇರ್‍ತಾರೆ. ಮುಂದಿನ ಸಲ ಹಬ್ಬ ಆದ ಮೇಲೆ ನೋಡುವಿಯಂತೆ ತಡಿ’ ಮಂಜಣ್ಣ ಅವನ ಅಚ್ಚರಿ ತಣಿಸುವಂತೆ ಹೇಳಿದ.

‘ಅಲ್ಲಾ ಮಂಜಣ್ಣ, ಈ ಬೆಟ್ಟ ಗುಡ್ಡ, ಕಾಡು ಕಣಿವೆ, ಹರಿವ ಹೊಳೆ, ಸೂರ್ಯ ಚಂದ್ರ ಎಲ್ಲಾ ಇದ್ದಂಗೆ ಈ ಕಲ್ಲಿನ ದೇವ್ರೂ ಅಲ್ವಾ? ಅದಕ್ಯಾಕೆ ನಮ್ಮ ಮೇಲೆ ತಿರಸ್ಕಾರ?’.

‘ತಿರಸ್ಕಾರ ಈ ಗೊಂಡಾರಣ್ಯದಲ್ಲಿ ಒಡಮೂಡಿರುವ ಚೌಡಮ್ಮನದು ಅಲ್ಲ. ಎಲ್ಲಾ ಈ ಮನುಷ್ಯರು ಮಾಡಿಕೊಂಡಿರದು. ನಮ್ಮಪ್ಪ ಹೇಳ್ತಿದ್ದ ವಿಷಯ ನಿನಗೆ ಹೇಳ್ತೀನಿ ಕೇಳು. ಅದು ನಮ್ಮ ಮುತ್ತಜ್ಜನ ಕಾಲ. ಈ ಗೌಡ್ರ ಮುತ್ತಜ್ಜನ ಮುಂದಾಳ್ತನದಲ್ಲೇ ಊರ ಜನ ಎಲ್ಲಾ ಸೇರಿಕೊಂಡು ಚೌಡಿ ಹಬ್ಬ ಮಾಡ್ತಾ ಇದ್ರಂತೆ. ಆಗ ಹರಕೆಯ ಹಂದಿ ಒಂದೇ ಇರ್‍ತಿತ್ತಂತೆ. ಅದನ್ನು ಚೌಡಿಗೆ ಒಪ್ಪಿಸಿದ ನಂತರ ಹಸ ಮಾಡುವ ಕೆಲಸವನ್ನು ನಮ್ಮ ಹೊಲಗೇರಿಯ ಜನವೇ ಮಾಡುತ್ತಿದ್ರಂತೆ. ಕೊನೆಯಲ್ಲಿ ಎಲ್ಲ ಒಟ್ಟಿಗೆ ಊಟ ಮಾಡಿ ಹೋಗುತ್ತಿದ್ದರಂತೆ.

ಬರುಬರುತ್ತಾ ಊರ ಹಂದಿಯ ಜೊತೆಗೆ, ಊರಲ್ಲಿನ ಇತರರೂ ತಮ್ಮ ಏಳಿಗೆಗಾಗಿ ಅಲಾಯದ

